# ಬೆಂಚು

ಇಂಗ್ಲಿಷ್ ಮೂಲ: **ರಿಚರ್ಡ್ ರೈವ್**
ಕನ್ನಡಕ್ಕೆ: **ಎಂ.ಎಸ್. ರಘುನಾಥ್**
ಕಲೆ: ವೆಂಕಟ್ರಮಣ ಭಟ್

"ನಾವು ಒಂದು ಸಂಕೀರ್ಣ ಸಮಾಜದ ಸಮಗ್ರ ಭಾಗ. ಸಂಕೀರ್ಣ ಸಮಾಜವೆಂದರೆ ಜನಸಂಖ್ಯೆಯ ವಿಶಾಲವಾದ ಭಾಗ. ಅಸ್ತಿತ್ವದ ಮೂಲ ಹಕ್ಕು ಬಾಧ್ಯತೆಗಳಿಂದ ವಂಚಿತರಾಗಿ, ಮನುಷ್ಯನನ್ನೇ ಕೆಳದರ್ಜೆಗೆ ದಮನ ಮಾಡಿರುವಂತಹ ಸಮಾಜ, ಕಾರಣ ಅವನು ಕರಿಯನಾಗಿ ಹುಟ್ಟಿದ ದುರದೃಷ್ಟಕ್ಕಾಗಿ; ಓರ್ವನ ಆಲೋಚನಾ ಕ್ರಮವನ್ನು ಅಪಾಯಕ್ಕೆ ಒಳಪಡಿಸುವ ರೀತಿಯಲ್ಲಿ, ಸಾಮಾಜಿಕ, ಆರ್ಥಿಕ ಸ್ಥಿತಿಯನ್ನು ಅಗಾಧ ಪ್ರಮಾಣದ ದಮನಿತರನ್ನು ಗುರಿಯಾಗಿಸಿಕೊಂಡಿರುವ ಈ ಸಮಾಜ..."

ಕಾರ್ಲಿ ಆ ಸಮಯದಲ್ಲಿ ಆತುರಾತುರವಾಗಿ ಟಿಪ್ಪಣಿ ಮಾಡಿಕೊಳ್ಳುತ್ತಿದ್ದ ಇಬ್ಬರು ಪತ್ರೆದಾರರನ್ನು ಗಮನಿಸಿ, ಅನಂತರ ಆ ಭಾಷಣಕಾರರ ಕಡೆಗೆ ನೋಡಿದ:

"ಯಾವುದೇ ಗುಂಪು ಇಷ್ಟಪಟ್ಟು ಹಾಗೂ ಉದ್ದೇಶಪೂರ್ವಕವಾಗಿ ಮತ್ತೊಂದು ಗುಂಪನ್ನು ಕೆಳಮಟ್ಟಕ್ಕೆ ತುಳಿಯುವ ಕ್ರಿಯೆಯನ್ನು ಸವಾಲಾಗಿ ಸ್ವೀಕರಿಸುವುದು ನಮಗೆ ಬಿಟ್ಟಿದ್ದು. ವರ್ಣಭೇದದ ಆಧಾರದಲ್ಲಿ ಮನುಷ್ಯರನ್ನೇ ವಿಭಜಿಸುವುದು ತಮ್ಮ ಹಕ್ಕು ಎಂದು ಭಾವಿಸಿರುವುದನ್ನು ನಾವು ಸವಾಲಾಗಿ ಸ್ವೀಕರಿಸಬೇಕು. ಹುಟ್ಟಿನಿಂದಲೇ ಗಳಿಸಿರುವ ಹಕ್ಕುಗಳನ್ನು ನಿಮ್ಮ ಮಕ್ಕಳಿಗೆ ವಂಚಿಸಲಾಗುತ್ತಿದೆ. ಅವರನ್ನು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಪ್ರತ್ಯೇಕಿಸಲಾಗುತ್ತಿದೆ..."

ಕಾರ್ಲಿ ಆಲೋಚಿಸಿದ, ತಾನು ಏನನ್ನು ಹೇಳುತ್ತಿದ್ದೇನೆ ಎಂಬುದು ಅವನಿಗೆ ಗೊತ್ತಿದೆ. ಅವನು ಹೇಳುತ್ತಿದ್ದಾನೆ, ನಾನು ಮತ್ತೊಬ್ಬನಷ್ಟೇ ಒಳ್ಳೆಯವನು, ಬಿಳಿಯವನಂತೆಯೇ. ಅದರ ಬಗ್ಗೆ ಸಾಕಷ್ಟು ಆಲೋಚಿಸಬೇಕಾಗಿದೆ. ಅಂದ ಮಾತ್ರಕ್ಕೆ, ನಾನು ಈಗ ಯಾವುದೇ ಸಿನಿಮಾವನ್ನು ನೋಡಲು ಹೋಗಬಹುದು ಎಂದೊ ಅಥವಾ ಯಾವ ಹೋಟೆಲಿಗೆ ಬೇಕಾದರೂ ಹೋಗಿ ತಿನ್ನಬಹುದೆಂದೊ ಅಥವಾ ನನ್ನ ಮಕ್ಕಳು ಬಿಳಿಯರ ಶಾಲೆಗೂ ಹೋಗಬಹುದು ಎಂದಿರಬಹುದೇ? ಇವೆಲ್ಲವೂ ಅಪಾಯಕಾರಿ ವಿಚಾರಗಳು, ಅವುಗಳ ಬಗ್ಗೆ ಆಲೋಚಿಸ ಬೇಕಾಗಿದೆ...

ಕಾರ್ಲಿಯ ಹುಬ್ಬು ಗಂಟಿಕ್ಕಿತು, ಅವನು ಆ ರೀತಿ ಆಲೋಚಿಸುತ್ತಿದ್ದ ಹಾಗೇ ವೇದಿಕೆಯ ಮೇಲೆ ಹಲವು ಭಾಷಣಕಾರರಿದ್ದರು–ಕರಿಯ ಹಾಗೂ ಬಿಳಿಯರೂ ಸೇರಿ–ಅವರ ಮಧ್ಯೆ ಯಾವುದೇ ವರ್ಣ ವ್ಯತ್ಯಾಸಗಳು ಇರಲಿಲ್ಲವೆಂಬಂತೆ ವರ್ತಿಸುತ್ತಿದ್ದರು. ನೀಲಿ ನಿಲುವಂಗಿ ಧರಿಸಿದ್ದ ಹೆಂಗಸೊಬ್ಬಳು ನೆಕ್‌ಸ್ಲಿಗೆ ಸಿಗರೇಟೊಂದನ್ನು ನೀಡುತ್ತಿದ್ದಳು...

ಇವೆಲ್ಲವೂ ಹೊಸದಾಗಿ ಕಂಡು ಬರುತ್ತಿತ್ತು. ಅವನು, ಕಾರ್ಲಿ, ಇವೆಲ್ಲವುಗಳನ್ನು ಒಪ್ಪಿಕೊಳ್ಳುವ ಮೊದಲು ಜಾಗೃತನಾಗಿರಬೇಕಾಗಿತ್ತು. ಆದರೆ, ಅವನೇಕೆ ಅವುಗಳನ್ನು ಒಪ್ಪಿಕೊಳ್ಳಬಾರದು?